# ಅಡುಗೆ ಜೊತೆಗೆ ಸಂಬಂಧ; ಆಹಾ ಚಿಕನ್ ಮಸಾಲ!



ಒಂದು ದೇಶದ ಬಗ್ಗೆ, ಅಲ್ಲಿನ ಆಚರಣೆ, ಸಂಸ್ಕೃತಿ ಬಗ್ಗೆ ಎಷ್ಟೇ ಕೇಳಿ ತಿಳಿದುಕೊಂಡಿದ್ದರೂ ಕಾಯಂ ಆಗಿ ಹೋಗಿ ಆ ದೇಶದಲ್ಲಿ ನೆಲೆಸುವುದು ಸುಲಭದ ಮಾತಲ್ಲ. ಆದರೆ ಐರ್ಲೆಂಡ್‌ನ ವ್ಯಾಕ್ಸ್‌ಫೋರ್ಡ್ ರಿಪಬ್ಲಿಕ್‌ನಿಂದ ಬೆಂಗಳೂರಿಗೆ ಉದ್ಯೋಗದ ನಿಮಿತ್ತ ಬಂದ ಜೇಮಿ ರಾತ್ ಅವರಿಗೆ ಇಲ್ಲಿಗೆ ಬಂದು ನೆಲೆಸಿದ್ದು ಎಂದರೆ ಬಹಳ ಸಲೀಸು. ಪ್ರತಿಷ್ಠಿತ ಬ್ರ್ಯಾಂಡ್‌ನ ಮದ್ಯದ ಅಂಗಡಿ ಒಂದಕ್ಕೆ ದಕ್ಷಿಣ ಏಷ್ಯಾ ಮಟ್ಟದ ಬ್ರ್ಯಾಂಡ್ ಅಂಬಾಸಿಡರ್ ಆಗಿರುವ ಜೇಮಿ ಬೆಂಗಳೂರಿಗೆ ಬಂದು ಈಗ ಎರಡೂವರೆ ವರ್ಷ ಕಳೆದಿದೆ. ಇಲ್ಲಿನ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೊಂಡಿದ್ದಾರೆ.

ಎಲ್ಲ ವಿದೇಶೀಯರಿಗೆ ಇಲ್ಲಿ ಬಂದಾಗ ಆಗುವ 'ಪರಕೀಯ' ಎಂಬ ಅನುಭವ ಇವರಿಗೂ ಮೊದಲು ಆಗಿತ್ತಂತೆ. ಇಲ್ಲಿನ ಭಾಷೆ, ಜನರ ನಡವಳಿಕೆ ನೋಡಿದಾಗ ಸಹಜವಾಗಿಯೇ ಕೊಂಚ ಹೆದರಿಕೆ, ಮುಜುಗರ ಉಂಟಾಗಿತ್ತಂತೆ. ಆದರೆ ಕೆಲವೇ ಕೆಲವು ದಿನಗಳಲ್ಲಿ ಇಲ್ಲಿನ ಜನರ ಸ್ನೇಹ ಹಾಗೂ ಹೊಂದಾಣಿಕೆ ಮನೋಭಾವ ಕಂಡು ನಿಬ್ಬೆರಗಾಗಿತ್ತಂತೆ. ಅಲ್ಲದೆ ಬೆಂಗಳೂರು ನಗರದ ಎಲ್ಲೇ ಹೋದರೂ ಬೇರೆ ಬೇರೆ ದೇಶಗಳ ಜನ ನೆಲೆಸಿರುವುದು, ಶಾಪಿಂಗ್ ಮಾಲ್‌ಗಳಲ್ಲಿ, ಸಿನಿಮಾ ಮಂದಿರಗಳಲ್ಲಿ, ಪಾರ್ಕ್, ರಸ್ತೆಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ ಕಾಣಸಿಗುವುದರಿಂದ ಅವರಿಗೆ ಇಲ್ಲಿಯೇ ಕಾಯಂ ಆಗಿ ನೆಲೆಸುವ ಧೈರ್ಯ ಬಂತಂತೆ.

'ಇಲ್ಲಿನ ಆಹಾರ ಪದ್ಧತಿ ಚೆನ್ನಾಗಿದೆ. ಊಟ ತಿಂಡಿಗಳೂ ರುಚಿಕರವಾಗಿದೆ. ಆದರೆ ಮಸಾಲೆಯುಕ್ತ ಆಹಾರ ಕಂಡರೆ ಸ್ವಲ್ಪ ಅಲರ್ಜಿ ಅನಿಸಿತ್ತು. ದೇಹಕ್ಕೆ ಒಗ್ಗದೇ ಇರುವ ಮಸಾಲೆ ಪದಾರ್ಥಗಳನ್ನು ಕಷ್ಟಪಟ್ಟು ಒಗ್ಗಿಸಿಕೊಳ್ಳಲು ಪ್ರಯತ್ನಿಸಿದರೂ ಈ ವಿಷಯದಲ್ಲಿ ನಾನು ವಿಫಲನಾದೆ. ಅದಕ್ಕಾಗಿ ನಾನೇ ಒಂದು ಪರಿಹಾರೋಪಾಯ ಕಂಡುಕೊಂಡು ಮನೆಯಲ್ಲೇ ಅಡುಗೆ ಮಾಡಲಾರಂಭಿಸಿದೆ. ಇದರಿಂದ ಆರೋಗ್ಯವೂ ಕೈಕೊಡಲಿಲ್ಲ. ರುಚಿಯಲ್ಲೂ ವೈವಿಧ್ಯ ಕಂಡುಕೊಂಡೆ' ಎಂದು ವಿವರಿಸುತ್ತಾರೆ ಜೇಮಿ.

ಮನೆಯಲ್ಲಿ ಏನೇನು ಅಡುಗೆ ಮಾಡುತ್ತೀರಾ? ಎಂಬ ಕುತೂಹಲದ ಪ್ರಶ್ನೆ ಎಸೆದರೆ 'ನನಗೆ ಮೀನಿನ ಅಡುಗೆ ಅಂದರೆ ಇಷ್ಟ. ಮೀನು ಫ್ರೈ, ಸಾರು ಮಾಡುತ್ತೇನೆ, ವಿವಿಧ ತರಕಾರಿಗಳ ಸಾಲಡ್, ಪಲ್ಯ ತಯಾರಿಸುತ್ತೇನೆ. ಇಟಾಲಿಯನ್ ಮತ್ತು ಫ್ರೆಂಚ್ ಫುಡ್ ಕೂಡ ಮಾಡಲು ಕಲಿತಿದ್ದೇನೆ. ನನ್ನ ತಾಯಿ ಕೆಲವೊಂದು 'ಸ್ಪೆಷಲ್ ಇನ್‌ಗ್ರೀಡಿಯಂಟ್ಸ್', ರೆಸಿಪಿಗಳನ್ನೂ ಕಳಿಸಿಕೊಟ್ಟಿದ್ದಾರೆ. ಅದನ್ನೂ ಮನೆಯಲ್ಲೇ ಪ್ರಯೋಗ ಮಾಡಿದ್ದೇನೆ. ಅದರಲ್ಲಿ ಯಶವನ್ನೂ ಕಂಡಿದ್ದೇನೆ. ಜತೆಗೆ ಭಾರತೀಯ ಶೈಲಿಯ ಚಿಕನ್ ಮಸಾಲ, ಬಟರ್ ಚಿಕನ್ ಅನ್ನೂ ಮಾಡೋದು ಕಲಿತೆ. ಆದರೆ ಇದು ಅಷ್ಟೊಂದು ರುಚಿಕರ ಅನಿಸಲಿಲ್ಲ. ಅದಕ್ಕಾಗಿ ಚಿಕನ್ ತಿನ್ನಬೇಕು ಅನಿಸಿದಾಗ ಹೋಟೆಲ್‌ಗಳನ್ನೇ ಮೊರೆ ಹೋಗುತ್ತೇನೆ' ಎಂದು ತಮ್ಮ ಅಡುಗೆ ಅನುಭವಗಳನ್ನು ಹಂಚಿಕೊಳ್ಳುತ್ತಾರೆ ಈ ವಿದೇಶಿ ಯುವಕ.

ವಾರಾಂತ್ಯದಲ್ಲಿ ಜಿಮ್, ಸ್ಪೋರ್ಟ್ಸ್ ಅನ್ನು ಇಷ್ಟಪಡುತ್ತಾರಂತೆ. ಅನೇಕ ಸ್ನೇಹಿತರನ್ನೂ ಹೊಂದಿರುವ ಜೇಮಿ ಪಬ್, ಬಾರ್‌ಗಳಲ್ಲೂ ವಾರಾಂತ್ಯದ ಸಂಜೆಯನ್ನು ಖುಷಿಯಿಂದ ಕಳೆಯುತ್ತಾರಂತೆ.

ಗೋವಾ, ಮುಂಬಯಿ, ಜಮ್ಮುಕಾಶ್ಮೀರ, ಕೇರಳ, ಕೋಲ್ಕತ್ತಾಗಳ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಬಂದಿದ್ದಾರೆ. ಅಂಡಮಾನ್ ನಿಕೋಬಾರ್ ದ್ವೀಪಗಳ ಸೊಬಗನ್ನೂ ಸವಿದಿದ್ದಾರೆ. ಇವರ ಅಪ್ಪ ಅಮ್ಮ ಕೂಡ ಬೆಂಗಳೂರಿಗೆ ಬಂದು ಮಗನ ಜತೆಗೆ ಕೆಲಕಾಲ ಕಳೆದಿದ್ದಾರೆ. ಆಗ ದೆಹಲಿ, ಆಗ್ರಾ, ಜೈಪುರ ಮುಂತಾದ ಕಡೆ ಪ್ರವಾಸ ಹೋಗಿ ಬಂದಿದ್ದಾರೆ.

ತಮ್ಮ ಸ್ವಂತ ಊರು ಐರ್ಲೆಂಡ್‌ನಲ್ಲಿ ಕೃಷಿ ಕುಟುಂಬದಲ್ಲಿ ಬೆಳೆದ ಜೇಮಿ ಓದಿದ್ದು ವಿಜ್ಞಾನ ಪದವಿ. ಜತೆಗೆ ಫಿಸಿಯೋಥೆರಪಿ ಕೋರ್ಸ್ ಅನ್ನೂ ಮಾಡಿದ್ದಾರೆ. ಆದರೆ ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡರೆ ಆದಾಯ ಕಡಿಮೆ ಎಂಬ ಸತ್ಯವನ್ನು ಬಹುಬೇಗ ಅರಿತುಕೊಂಡು ಉದ್ಯಮದಲ್ಲಿ ತೊಡಗಿಸಿಕೊಳ್ಳುವ ನಿರ್ಧಾರ ಮಾಡಿದ್ದಾರೆ.

ಇಲ್ಲಿನ ಟ್ರಾಫಿಕ್ ಇವರಿಗೆ ಕಿರಿಕಿರಿ ಎನಿಸಿದೆ. ಜತೆಗೆ ರಸ್ತೆ ಬದಿಯಲ್ಲಿ ಓಡಾಡುವ ಹಸು, ನಾಯಿಗಳು ಕೂಡ ಇವರಿಗೆ ಕಿರಿಕಿರಿ ಎನಿಸುತ್ತದೆಯಂತೆ. ಉಳಿದಂತೆ ಉದ್ಯಾನ ನಗರವನ್ನು ಬಹುವಾಗಿ ಪ್ರೀತಿಸುತ್ತೇನೆ ಎನ್ನುತ್ತಾರೆ ಜೇಮಿ. ಏನೇ ಆದರೂ ಇವರಿಗೊಂದು ಕೊರಗು ಇದೆಯಂತೆ. ಐರ್ಲೆಂಡ್ ಅನ್ನು ಬಿಟ್ಟು ಬಂದಾಗ ಏನೂ ಅನಿಸದೇ ಇದ್ದರೂ ತಾನು ಬಹಳ ಇಷ್ಟಪಡುತ್ತಿದ್ದ ಹಾಕಿ ಆಟದ ಗೆಳೆಯರನ್ನು ಬಹುವಾಗಿ ಮಿಸ್ ಮಾಡುತ್ತಿದ್ದೇನೆ ಎಂದು ಅನಿಸುತ್ತದೆಯಂತೆ. ಹಾಕಿ ಆಟ ನೆನಪಿಸಿಕೊಂಡಾಗ ಮನಸ್ಸು ಭಾವನಾತ್ಮಕವಾಗಿ ಬೇಸರದ ಮೂಡ್‌ಗೆ ಜಾರುತ್ತಾರೆ.

■ ಯು.ಅನಂತ್